ಅ) ಈ ಪಿಂಚಣಿ ಯೋಜನೆಗಾಗಿ ಎಷ್ಟು ಮಂದಿ ಫಲಾನುಭವಿಗಳನ್ನು ಗುರುತಿಸಲಾಗಿದೆ (ವಿವರ ನೀಡುವುದು)?

ಇ) ಈ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) :-

ಅ) ಹೌದು.

ಆ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಮೊದಲನೇ ಹಂತದಲ್ಲಿ 9961 ನೇಕಾರ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇ) ಯೋಜನೆಯ ಅನುಷ್ಠಾನವನ್ನು ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಷನ್‌ಗೆ ವಹಿಸಲಾಗಿದೆ. ಈ ಯೋಜನೆಯ ವಿವರಗಳನ್ನು ಈಗಾಗಲೇ ಅಂತಿಮಗೊಳಿಸಲಾಗುತ್ತಿದೆ. ಶೀಘ್ರದಲ್ಲಿಯೇ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು.

ವಿಷಯ :- ಪುರಸಭೆಗಳ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 843 (753)

ಶ್ರೀ ಬಿ. ಬಿ. ಶಿವಪ್ಪ, (ಸಕಲೇಶಪುರ) :- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿರುವ ವಿವಿಧ ಪುರಸಭೆಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಅನುದಾನವನ್ನು ಯಾವ ಆಧಾರದಲ್ಲಿ ನೀಡಲಾಗುವುದು?

2) ಸಕಲೇಶಪುರ ಪುರಸಭೆಗೆ ಕಳೆದ ಮೂರು ವರ್ಷಗಳಲ್ಲಿ ವರ್ಷವೊಂದಕ್ಕೆ ಎಷ್ಟರಂತೆ ಅಭಿವೃದ್ಧಿ ನಿಧಿಯನ್ನು ಕೊಡಲಾಗಿದೆ.

3) ಇದು ಇಲ್ಲಿನ ಜನಸಂಖ್ಯೆಯನ್ನು ಮತ್ತು ವಿಸ್ತೀರ್ಣದ ದೃಷ್ಟಿಯಿಂದ ಸಮಂಜಸವಾಗಿದೆಯೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

ಅ) ತುರ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಮುನ್ಸಿಪಾಲಿಟಿಗಳ ಆರ್ಥಿಕ ಸ್ಥಿತಿ ಆಧರಿಸಿ ವಿವೇಚನಾತ್ಮಕ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಆ) 1993-94 ರೂ. 0.50 ಲಕ್ಷಗಳು
1994-95 ರೂ. -
1995-96 ರೂ. 9.00 ಲಕ್ಷಗಳು.

ಇ) ಅನುದಾನವನ್ನು ಮುನ್ಸಿಪಾಲಿಟಿಗಳ ಆರ್ಥಿಕ ಸ್ಥಿತಿಯನ್ನು ಆಧರಿಸಿ ಮಂಜೂರು ಮಾಡುತ್ತಿರುವುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ವಿಷಯ :- ಸಿರ್ಸಿ- ಅಂಕೋಲಾ ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯ ಬಗ್ಗೆ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 844 (1366)

ಶ್ರೀ ವಿಶ್ವೇಶ ಹೆಗ್ಗಡೆ (ಅಂಕೋಲಾ) :- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿರ್ಸಿ-ಯಲ್ಲಾಪುರ-ಅಂಕೋಲಾ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು?

ಆ) 1995-96 ನೇ ಸಿರ್ಸಿ- ಯಲ್ಲಾಪುರ - ಅಂಕೋಲಾ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆದಿದ್ದು ಎಷ್ಟು? (ತಾಲ್ಲೂಕುವಾರು ಎಕರೆವಾರು ವಿವರ ನೀಡುವುದು).

ಇ) ರೇಷ್ಮೆ ಬೆಳೆ: ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :-

ಅ) 1) ಜಿಲ್ಲಾ ವಲಯ ಯೋಜನೆ ಅಡಿಯಲ್ಲಿ

ಸಲಹಾ ಸೇವೆಗಳು, ಪ್ರಚಾರ ಮತ್ತು ದೃಶ್ಯ, ಶ್ರಾವ್ಯ ಕಾರ್ಯಕ್ರಮ ಅಡಿಯಲ್ಲಿ ಕ್ಷೇತ್ರೋತ್ಸವಗಳು, ತಾಲ್ಲೂಕು ಮಟ್ಟದ ಕಾರ್ಯಗಾರ ಪ್ರದರ್ಶನ ತಾಕುಗಳು, ರೇಷ್ಮೆ ಸಾಹಿತ್ಯ ಮುಂತಾದವುಗಳು.

2) ತರಬೇತಿ ಮತ್ತು ಅಧ್ಯಯನ ಪ್ರವಾಸ

3) ರೋಗ ನಿಯಂತ್ರಣ.

4) ಮಹಿಳೆಯರಿಗಾಗಿ ವಿಶೇಷ ಪ್ರಾತ್ಯಾಕ್ಷಣಾ ಕ್ಷೇತ್ರ.

ವಿಶೇಷ ಘಟಕ ಯೋಜನೆ ಅಡಿಯಲ್ಲಿ

1) ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಶೇಕಡ 60 ಸಹಾಯ ಧನ.

2) ಹೊಸದಾಗಿ ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ ಧನ.

3) ಪ್ಯಾಕೇಜ್ ಬೆನಿಫಿಟ್ಸ್.